ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ

ಸಿಸಿ ನಂಬರ 292/2020

ಸಿ ಡಬ್ಲ್ಯೂ- 7

ಪಿ ಡಬ್ಲ್ಯೂ- 7

ದಿಃ 22-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಹುಚನಪ್ಪ ಛಲವಾದಿ

ತಂದೆಯ ಹೆಸರುಃ ಯಮುನಪ್ಪ

ವಯಸ್ಸುಃ 61 ವರ್ಷ

ಉದ್ಯೋಗಃ ನಿವೃತ್ತ ಸಂಚಾರಿ ನಿರೀಕ್ಷಕ

ವಿಳಾಸಃ ಯಲ್ಲಾಪುರ

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

2016 ರಿಂದ 2020 ರವರೆಗೆ ಅಂಕೋಲಾ ಕೆ.ಎಸ್.ಆರ್.ಟಿ.ಸಿ. ಘಟಕದಲ್ಲಿ ಸಹಾಯಕ ಸಂಚಾರಿ ನಿರೀಕ್ಷಕ ಎಂದು ಸೇವೆ ಸಲ್ಲಿಸಿದ್ದೇನೆ. ಚಾಸಾ-1 ರವರು ಘಟಕ ವ್ಯವಸ್ಥಾಪಕರಿದ್ದರು. ಚಾಸಾ-2 ರಿಂದ 6 ಮತ್ತು 8,9 ರವರು ಸಿಬ್ಬಂದಿ ಇದ್ದರು. ಆರೋಪಿ ಚಾಲಕ ಕಂ ನಿರ್ವಾಹಕನಿದ್ದ. ದಿಃ 30-07-2018 ರಂದು ಆರೋಪಿ ಡ್ಯೂಟಿ ಮುಗಿಸಿಕೊಂಡು ಡಿಪೋಗೆ ಬಂದಾಗ ಡಿಸೇಲ್ ಹೆಚ್ಚಿಗೆ ಖರ್ಚಾದ ಕುರಿತು ಚಾಸಾ-6 ರವರು ವಿಚಾರಿಸಿದಾಗ ಆರೋಪಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಈ ಕುರಿತು ಚಾಸಾ-1 ರವರಿಗೆ ಚಾಸಾ-6 ರವರು ವರದಿ ಮಾಡಿರುತ್ತಾರೆ.

ದಿಃ 08-12-2018 ರಂದು ಆರೋಪಿಗೆ ಅಮಾನತ್ತು ಮಾಡಿದ ಬಗ್ಗೆ ಮೇಲಾಧಿಕಾರಿಗಳಿಂದ ಆದೇಶ ಬಂದಿದ್ದು, ಅದೇ ದಿನ ಆರೋಪಿ ಡಿಪೋಗೆ ಬಂದು ನಾನು ಕೆಲಸ ನಿರ್ವಹಿಸುತ್ತಿದ್ದ ಗೇಟ್ ಬಳಿ ಬಂದು ನನ್ನನ್ನು ಯಾಕೆ ಸಸ್ಪೆಂಡ್ ಮಾಡಿಸಿರುತ್ತೀರಿ ಎಂದು ಬೋಳಿ ಮಗನೆ, ಸೂಳೆ ಮಗನೆ ಎಂದು ಬೈದಾಡಿ ಬಲಗಾಲಿನಿಂದ ಚಪ್ಪಲಿ ತೋರಿಸಿರುತ್ತಾರೆ.

ಈ ಕುರಿತು ಪೊಲೀಸರು ಸೆಕ್ಯೂರಿಟಿ ಗೇಟ್ ಹತ್ತಿರ ಒಳಭಾಗದಲ್ಲಿ ನಾನು ತೋರಿಸಿದ ಸ್ಥಳವನ್ನು ಪಂಚನಾಮೆ ಮಾಡಿ, ಸಹಿ ಪಡೆದಿರುತ್ತಾರೆ. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಸಿ ಎಂದು ಗುರುತಿಸಲಾಯಿತು. ಈ ಕುರಿತು ಪೊಲೀಸರು ವಿಚಾರಿಸಿದ್ದಾರೆ.

ಈ ಹಂತದಲ್ಲಿ ಎ.ಪಿ.ಪಿ. ಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕಾಗಿ ಕೋರಿಕೊಂಡಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಗಿರುತ್ತದೆ. ಎ.ಪಿ.ಪಿ.ಯವರಿಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟಿ ಸವಾಲುಃ ಎ.ಪಿ.ಪಿ. ಯವರಿಂದಃ</u>

ದಿನಾಂಕಃ 12-08-2018 ರಂದು ಆರೋಪಿ ಮೇಲಾಧಿಕಾರಿ ರವರು ಮಾಡಿದ ಕರ್ತವ್ಯ ತಡೆ ಆದೇಶದ ಪ್ರತಿ ಪಡೆದಿದ್ದ ಎಂದರೆ ಸರಿ. ಅದೇ ದಿನ ಬೆಳಿಗ್ಗೆ 9.30 ಗಂಟೆಗೆ

ನನಗೆ ಬೈದಾಡಿ, ಜೀವ ಬೆದರಿಕೆ ಹಾಕಿದ ರೀತಿಯಲ್ಲಿಯೇ ಚಾಸಾ-6 ರವರಿಗೂ ಸಹ ಆರೋಪಿ ಬೈದು ಜೀವ ಬೆದರಿಕೆ ಹಾಕಿರುತ್ತಾನೆಂದು ಗೊತ್ತಾಯಿತು ಎಂದರೆ ಸರಿ. ಚಾಸಾ-1 ರವರಿಗೂ ಸಹ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುವ ಕುರಿತಾಗಿ ಗೊತ್ತಾಯಿತು ಎಂದರೆ ಸರಿ. ಈ ಕುರಿತು ನನ್ನ ಹೇಳಿಕೆಯಲ್ಲಿ ಬರೆಸಿದ್ದೇನೆ ಎಂದರೆ ಸರಿ.

(ಪಾಟಿ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.